**ಸ್ಯಾಂಕಿ ರಸ್ತೆಗೆ ಅಡ್ಡವಾಗಿ ಕನ್ನಿಂಗ್‌ಹ್ಯಾಮ್ ರಸ್ತೆ ಮತ್ತು ಕುಮಾರಾಕೃಪ ರಸ್ತೆಗೆ ಸಂಪರ್ಕ ಕಲ್ಪಿಸಲು ನಿರ್ಮಿಸಲಾಗಿರುವ "ವಾಹನ ಕೆಳಸೇತುವೆ"ಯಲ್ಲಿ ಮಳೆಗಾಲದ ಅವಧಿಯಲ್ಲಿ ನೀರು ನಿಲ್ಲುವಿಕೆಯನ್ನು ಸಂಪೂರ್ಣವಾಗಿ ಮತ್ತು ಶಾಶ್ವತವಾಗಿ ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ವರದಿ**


* * * * *

**ಹಿನ್ನಲೆ:**

ಸ್ಯಾಂಕಿ ರಸ್ತೆಗೆ ಅಡ್ಡವಾಗಿ ಕನ್ನಿಂಗ್‌ಹ್ಯಾಮ್ ರಸ್ತೆ ಮತ್ತು ಕುಮಾರಾಕೃಪ ರಸ್ತೆಗೆ ಸಂಪರ್ಕ ಕಲ್ಪಿಸಲು ನಿರ್ಮಿಸಲಾಗಿರುವ **"ವಾಹನ ಕೆಳಸೇತುವೆ"**ಯನ್ನು 2009 ಮತ್ತು 2011ರ ಅವಧಿಯಲ್ಲಿ ನಿರ್ಮಿಸಲಾಗಿದ್ದು, ಸದರಿ ವಾಹನ ಕೆಳಸೇತುವೆಯನ್ನು **ಪ್ರೀ-ಕ್ಯಾಸ್ಟ್ ಕಾಂಕ್ರೀಟ್ ಸೆಗ್‌ಮೆಂಟ್ಸ್‌ಗಳನ್ನು ಉಪಯೋಗಿಸಿಕೊಂಡು ನಿರ್ಮಿಸಿರುವ ಕೆಳಸೇತುವೆಯಾಗಿರುತ್ತದೆ.**

ಸದರಿ ಕೆಳಸೇತುವೆಯನ್ನು "ಯು" ಆಕಾರದಲ್ಲಿ ನಿರ್ಮಿಸಿದ್ದು, ಕೆಳಸೇತುವೆಯ ತಳಭಾಗದಲ್ಲಿ ನೀರು ಹರಿಯಲು ಚರಂಡಿ ವ್ಯವಸ್ಥೆಯನ್ನು 2 ಜಾಗಗಳಲ್ಲಿ ಕಲ್ಪಿಸಲಾಗಿರುತ್ತದೆ. ಸದರಿ ಪ್ರದೇಶದಲ್ಲಿ ಯಾವುದೇ ರಾಜಕಾಲುವೆ (ನೀರುಗಾಲುವೆ)ಯು ಇಲ್ಲದೇ ಇರುವುದರಿಂದ ಸದರಿ ತಳಭಾಗದ ಚರಂಡಿಯನ್ನು ರಸ್ತೆ ಬದಿಯ ಮೋರಿಗೆ ಸಂಪರ್ಕಿಸಲಾಗಿರುತ್ತದೆಂಬ ಮಾಹಿತಿ ಇರುತ್ತದೆ. ಸದರಿ ಚರಂಡಿಗೆ ಕಬ್ಬಿಣದ ಹೊದಿಗೆಯನ್ನು ಅಳವಡಿಸಲಾಗಿರುತ್ತದೆ.

ದಿನಾಂಕ:22.05.2023ರಂದು ಸದರಿ ಪ್ರದೇಶವನ್ನು ತಪಾಸಣೆ ಮಾಡಲಾಗಿ, ಸದರಿ "ಯು" ಆಕಾರದ ಕೆಳಸೇತುವೆಯ ತಳಭಾಗದಲ್ಲಿ ನಿರ್ಮಿಸಲಾಗಿರುವ ಚರಂಡಿಯು ಸಂಪೂರ್ಣವಾಗಿ ಮುಚ್ಚಿ ಹೋಗಿದ್ದು, ಕಳೆದ 03 ವರ್ಷಗಳಿಂದ ಮಳೆ ಬಂದಂತಹ ಸಂಧರ್ಭದಲ್ಲಿ ತಳಭಾಗದಲ್ಲಿ ಒಂದು ನೀರಿನ ತೊಟ್ಟಿಯನ್ನು ನಿರ್ಮಿಸಿ, ಆ ತೊಟ್ಟಿಯಿಂದ ಮೋಟರ್ ಪಂಪ್ ಸಹಾಯದಿಂದ ನೀರನ್ನು ಹೊರತೆಗೆಯುವ ತಾತ್ಕಾಲಿಕ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಾ ಬರಲಾಗಿದೆ.






ಈ ರೀತಿಯ ವ್ಯವಸ್ಥೆಯು ತಾತ್ಕಾಲಿಕವಾಗಿದ್ದು, ಮಳೆ ಸುರಿದ ದಿನ ಮತ್ತು ಮುಂದಿನ 02 ದಿನಗಳು ವಾಹನ ಸಂಚಾರವನ್ನು ತಡೆಗಟ್ಟಿ ನೀರನ್ನು ಹೊರಹಾಕುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಸದರಿ ನಿರ್ಮಿಸಲಾಗಿರುವ 02 ಚರಂಡಿಗಳು ಸಂಪೂರ್ಣವಾಗಿ ಮುಚ್ಚಿ ಹೋಗಿದ್ದು, ಅವುಗಳನ್ನು ಪುನರ್ ಸ್ಥಾಪಿಸುವುದು ಸಾಧ್ಯವಾಗುವುದಿಲ್ಲ. ಸದರಿ ಕೆಳಸೇತುವೆಯ ಸುತ್ತಮುತ್ತಲು ರಾಜಕಾಲುವೆಗಳು ಇಲ್ಲದೇ ಇರುವ ಹಿನ್ನಲೆಯಲ್ಲಿ ಸದರಿ 02 ಚರಂಡಿಗಳು ಮುಚ್ಚಿ ಹೋಗಿರುತ್ತದೆ.

**ಶಾಶ್ವತ ಪರಿಹಾರ:**

1. ಸದರಿ ವಾಹನ ಕೆಳಸೇತುವೆಯು "ಯು" ಆಕಾರದಲ್ಲಿದ್ದು, ಮಳೆ ನೀರು ಕೆಳಸೇತುವೆಗೆ ಹೋಗದಂತೆ ತಡೆಗಟ್ಟುವುದು ಶಾಶ್ವತ ಪರಿಹಾರವಾಗಿರುತ್ತದೆ. ಇದಕ್ಕಾಗಿ ಸದರಿ ಕೆಳಸೇತುವೆಯನ್ನು ಸಂಪೂರ್ಣವಾಗಿ ಮಳೆ ನೀರು ಬೀಳದಂತೆ ಕೆಳಸೇತುವೆಯ Up ramp and Down Ramp ಅನ್ನು Galvanized Coloured Sheet ಗಳಿಂದ ಸಂಪೂರ್ಣವಾಗಿ ಮುಚ್ಚುವುದು ಮತ್ತು ಬೆಳಕಿಗಾಗಿ ಪ್ರತಿ 03.00ಮೀ ಜಾಗದಲ್ಲಿ ಪಾರದರ್ಶಕ Fibre Plastic ಉಪಯೋಗಿಸುವುದು. ಕೆಳಗಿನ ಗಾಳಿಯನ್ನು ಹೊರತೆಗೆಯಲು ಸ್ವಯಂಚಾಲಿತ ಗಾಳಿಯಂತ್ರ (Fan)ಅನ್ನು ಅಳವಡಿಸುವುದು

2. ಸದರಿ Up ramp and Down Ramp ಗಳಲ್ಲಿ ರಸ್ತೆ ಮೇಲ್ಮೈ ಮಳೆ ನೀರು ಹರಿದುಹೋಗದಂತೆ ಉಬ್ಬರವನ್ನು ನಿರ್ಮಿಸುವುದು.

3. ಕೆಳಸೇತುವೆಯ ಕೆಳಭಾಗದಲ್ಲಿ ಸಿ.ಸಿ.ಟಿ.ವಿ ಕ್ಯಾಮಾರಗಳನ್ನು ಅಳವಡಿಸುವುದರ ಜೊತೆಗೆ Vertical Clearance Gauge Beam ಅನ್ನು ಅಳವಡಿಸಿ ಅತೀ ಪ್ರವಾಹ ಉಂಟಾದ/ತುರ್ತು ಸಂಧರ್ಭಗಳಲ್ಲಿ ಒಂದು Boom Barrier ಅನ್ನು ಸಹ ನಿರ್ಮಿಸಿ ಕೆಳಸೇತುವೆಯ ವಾಹನ ನಿರ್ಬಂಧ ಪಡಿಸುವ ಕ್ರಮವನ್ನು ಸಂಚಾರ ಪೊಲೀಸ್ ಇಲಾಖೆಯ ಸಹಯೋಗದಿಂದ ನಿರ್ವಹಣೆ ಮಾಡಲು ಉದ್ದೇಶಿಸಲಾಗಿದೆ.

24/5/2023

ಪ್ರಧಾನ ಅಭಿಯಂತರರು.
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ


**ಕಿನೋ ಚಿತ್ರಮಂದಿರ ರಸ್ತೆ (ಆನಂದರಾವ್ ವೃತ್ತ)ದಿಂದ ಸ್ವಾಸ್ತಿಕ್ ವೃತ್ತ ಮತ್ತು ಮಂತ್ರಿಮಾಲ್‌ಗೆ ಸಂಪರ್ಕಿಸುವ ರೈಲ್ವೆ ಕೆಳಸೇತುವೆಯ ಬಗ್ಗೆ ನೀರು ನಿಲ್ಲುವಿಕೆಯ ಬಗ್ಗೆ ಸಂಪೂರ್ಣ ವರದಿ**

* * * * *

<u>ಹಿನ್ನಲೆ:</u>

ಕಿನೋ ಚಿತ್ರಮಂದಿರ ರಸ್ತೆಯ ಮಧ್ಯ ಭಾಗದಲ್ಲಿ ರೈಲ್ವೆ ಕೆಳಸೇತುವೆಯನ್ನು ಬಹಳ ಹಿಂದೆಯೇ ನಿರ್ಮಿಸಲಾಗಿದ್ದು, ಈ ಕೆಳಸೇತುವೆಯು ಆನಂದರಾವ್ ವೃತ್ತ ಮತ್ತು ಶೇಷಾದ್ರಿಪುರಂನ ಸ್ವಾಸ್ತಿಕ್ ವೃತ್ತದ ನಡುವೆ ಸ್ಥಾಪಿತವಾಗಿದ್ದು, ಈ ಒಂದು ಕೆಳಸೇತುವೆಯಲ್ಲಿ ನೀರು ನಿಲ್ಲುವಿಕೆಯನ್ನು 2016–17ರಲ್ಲಿ ಕೆಳಸೇತುವೆಯ ತಳಭಾಗದಿಂದ ಮಂತ್ರಿಮಾಲ್ ಪಕ್ಕದಲ್ಲಿ ಹರಿಯುವ ರಾಜಕಾಲುವೆಗೆ ಸಂಪರ್ಕಿಸಲಾಗಿರುತ್ತದೆ.

ಸದರಿ ರೈಲ್ವೆ ಕೆಳಸೇತುವೆಯ ತಳಭಾಗದಲ್ಲಿ ಗ್ರೇಟಿಂಗ್‌ಅನ್ನು ಅಳವಡಿಸಿ ಮಳೆ ನೀರು ಹೋಗುವಂತೆ ಅನುವು ಮಾಡಲಾಗಿದ್ದು, ಸದರಿ ವ್ಯವಸ್ಥೆಯು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುತ್ತದೆ. ಸದರಿ ಚರಂಡಿಯನ್ನು ರಾಜಕಾಲುವೆಗೆ ಸಂಪರ್ಕಿಸಲಾಗಿರುವ ಹಿನ್ನಲೆಯಲ್ಲಿ ಸದರಿ ಸ್ಥಳದಲ್ಲಿ ನೀರು ನಿಲ್ಲುವಿಕೆ ಕಂಡುಬಂದಿರುವುದಿಲ್ಲ. ಸದರಿ ಚರಂಡಿಯ ಗಾತ್ರವು 2.85ಮೀ * 1.98ಮೀ (60.72 ಚ.ಅ) ನಷ್ಟು ಇದ್ದು, ಸದರಿ ಚರಂಡಿಯು ಗಂಟೆಗೆ 50.00 ಲಕ್ಷ ಲೀಟರ್‌ಗೂ ಅಧಿಕ ಮಳೆ ನೀರನ್ನು ಹೊರ ಸಾಗಿವ ಸಾಮರ್ಥ್ಯವಿರುತ್ತದೆ. ಸದರಿ ಪೈಪ್‌ಲೈನ್ ಉದ್ದವು ಸುಮಾರು 900 ಮೀಟರ್‌ನಷ್ಟು ಇದ್ದು, ನಡುನಡುವೆ ಪರಿವೀಕ್ಷಣಾ ಚೇಂಬರ್‌ಗಳನ್ನು ನಿರ್ಮಿಸಲಾಗಿರುತ್ತದೆ. ಸದರಿ ಕೆಳಸೇತುವೆಯಲ್ಲಿ ಯಾವುದೇ ನೀರು ನಿಲ್ಲುವಿಕೆಗೆ ಅವಕಾಶವಿರುವುದಿಲ್ಲ.



ಕ್ರಮ ಕೈಗೊಳ್ಳಬೇಕಾಗಿರುವ ವಿವರ:

1. ಸದರಿ 1.20ಮೀ ವ್ಯಾಸದ ಕೊಳವೆಯನ್ನು ಪ್ರತಿ ಮಳೆಗೆ ಪರಿಶೀಲಿಸಲು ಕ್ರಮಕೈಗೊಳ್ಳಲಾಗಿರುವುದು ಕಂಡಿಬಂದಿರುತ್ತದೆ. ಸದರಿ ವ್ಯವಸ್ಥೆಯನ್ನು ಮುಂದುವರೆಸಲು ಸೂಚಿಸಲಾಗಿರುತ್ತದೆ.

24/05/2023

ಪ್ರಧಾನ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕಾವೇರಿ ಚಿತ್ರಮಂದಿರ ಮುಂಭಾಗದಲ್ಲಿರುವ ವಾಹನ ಕೆಳಸೇತುವೆ ಬಗ್ಗೆ ನೀರು ನಿಲ್ಲುವಿಕೆಯ ಬಗ್ಗೆ ಸಂಪೂರ್ಣ ವರದಿ

* * * * *

**ಹಿನ್ನಲೆ:**

ಕಾವೇರಿ ಚಿತ್ರಮಂದಿರ ಮುಂಭಾಗದಲ್ಲಿರುವ ವಾಹನ ಕೆಳಸೇತುವೆಯನ್ನು 2009 ಮತ್ತು 2011ರ ಅವಧಿಯಲ್ಲಿ ನಿರ್ಮಿಸಲಾಗಿದ್ದು, ಈ ಕೆಳಸೇತುವೆಯು ಸ್ಯಾಂಕ್ ರಸ್ತೆಯ ಬ್ಯಾಶಯಂ ವೃತ್ತ ಮತ್ತು ಬಳ್ಳಾರಿ ರಸ್ತೆಯ ನಡುವೆ ಸ್ಥಾಪಿತವಾಗಿದ್ದು, ಈ ಒಂದು ಕೆಳಸೇತುವೆಯಲ್ಲಿ ನೀರು ನಿಲ್ಲುವಿಕೆಗಾಗಿ ಪರಿಶೀಲಿಸಲಾಯಿತು.

ಸದರಿ ಕೆಳಸೇತುವೆಯನ್ನು "ಯು" ಆಕಾರದಲ್ಲಿ ನಿರ್ಮಿಸಿದ್ದು, ಕೆಳಸೇತುವೆಯ ತಳಭಾಗದಲ್ಲಿ ನೀರು ಹರಿಯಲು ಚರಂಡಿ ವ್ಯವಸ್ಥೆಯನ್ನು 1 ಸ್ಥಳದಲ್ಲಿ ಕಲ್ಪಿಸಲಾಗಿರುತ್ತದೆ. ಸದರಿ ಪ್ರದೇಶದಲ್ಲಿ ಯಾವುದೇ ರಾಜಕಾಲುವೆ (ನೀರುಗಾಲುವೆ)ಯು ಇಲ್ಲದೇ ಇರುವುದರಿಂದ, ಸದರಿ ತಳಭಾಗದ ಚರಂಡಿಯನ್ನು ಬಳ್ಳಾರಿ ರಸ್ತೆಯ ರಾಷ್ಟ್ರೀಯ ಕ್ಷಯ ರೋಗ ಸಂಸ್ಥೆಯ ಮುಂಭಾಗದಲ್ಲಿರುವ ರಸ್ತೆ ಬದಿಯ ಮೋರಿಗೆ ಸಂಪರ್ಕಿಸಲಾಗಿರುತ್ತದೆ ಮತ್ತು ಸದರಿ ಚರಂಡಿಗೆ ಕಬ್ಬಿಣದ ಹೊದಿಗೆಯನ್ನು ಅಳವಡಿಸಲಾಗಿದ್ದು, ಸದರಿ ಚರಂಡಿಯ ಗಾತ್ರವು ಸಂಕೂಚಿತವಾಗಿರುವುದು ಸಹ ಕಂಡುಬಂದಿರುತ್ತದೆ.

ದಿನಾಂಕ:22.05.2023ರಂದು ಸದರಿ ಪ್ರದೇಶವನ್ನು ತಪಾಸಣೆ ಮಾಡಲಾಗಿ, ಸದರಿ "ಯು" ಆಕಾರದ ಕೆಳಸೇತುವೆಯ ತಳಭಾಗದಲ್ಲಿ ನಿರ್ಮಿಸಲಾಗಿರುವ ಚರಂಡಿಯು ಸ್ವಚ್ಛವಾಗಿರುತ್ತದೆ. ಆದರೆ, ಸದರಿ ಗಾತ್ರವು 1.00ಮೀ * 1.00ಮೀ ಇದ್ದು, ಪೈಪ್‌ಗಳ ಮುಖಾಂತರ ಮಳೆ ನೀರು ಸೆಳಿಯುವ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ.

ಪ್ರಸ್ತುತ, ಸದರಿ ಮಳೆ ನೀರು ನಿಲ್ಲುವಿಕೆಯಾಗಿ, ನಿಧಾನವಾಗಿ ಎನ್.ಟಿ.ಐ ಮುಂಭಾಗದಲ್ಲಿರುವ ಮೋರಿಯಲ್ಲಿ ಮಳೆ ನೀರಿನ ಪ್ರಮಾಣವು ಕಡಿಮೆಯಾದ ನಂತರ ಈ ಕೆಳಸೇತುವೆಯ ಪ್ರದೇಶದಿಂದ ನೀರು ಹರಿದು ಹೋಗುತ್ತಿರುತ್ತದೆ.

**ಶಾಶ್ವತ ಪರಿಹಾರ:**

1. ಸದರಿ ವಾಹನ ಕೆಳಸೇತುವೆಯು "ಯು" ಆಕಾರದಲ್ಲಿದ್ದು, ಮಳೆ ನೀರು ಕೆಳಸೇತುವೆಗೆ ಹೋಗದಂತೆ ತಡೆಗಟ್ಟುವುದು ಶಾಶ್ವತ ಪರಿಹಾರವಾಗಿರುತ್ತದೆ. ಇದಕ್ಕಾಗಿ ಸದರಿ ಕೆಳಸೇತುವೆಯನ್ನು ಸಂಪೂರ್ಣವಾಗಿ ಮಳೆ ನೀರು ಬೀಳದಂತೆ ಕೆಳಸೇತುವೆಯ Up ramp

and Down Ramp ಅನ್ನು Galvanized Coloured Sheet ಗಳಿಂದ ಸಂಪೂರ್ಣವಾಗಿ ಮುಚ್ಚುವುದು ಮತ್ತು ಬೆಳಕಿಗಾಗಿ ಪ್ರತಿ 03.00ಮೀ ಜಾಗದಲ್ಲಿ ಪಾರದರ್ಶಕ Fibre Plastic ಉಪಯೋಗಿಸುವುದು. ಕೆಳಗಿನ ಗಾಳಿಯನ್ನು ಹೊರತೆಗೆಯಲು ಸ್ವಯಂಚಾಲಿತ ಗಾಳಿಯಂತ್ರ (Fan)ಅನ್ನು ಅಳವಡಿಸುವುದು

2. ಸದರಿ Up ramp and Down Ramp ಗಳಲ್ಲಿ ರಸ್ತೆ ಮೇಲ್ಮೈ ಮಳೆ ನೀರು ಹರಿದುಹೋಗದಂತೆ ಉಬ್ಬರವನ್ನು ನಿರ್ಮಿಸುವುದು.

3. ಕೆಳಸೇತುವೆಯ ಕೆಳಭಾಗದಲ್ಲಿ ಸಿ.ಸಿ.ಟಿ.ವಿ ಕ್ಯಾಮಾರಗಳನ್ನು ಅಳವಡಿಸುವುದರ ಜೊತೆಗೆ Vertical Clearance Gauge Beam ಅನ್ನು ಅಳವಡಿಸಿ ಅತೀ ಪ್ರವಾಹ ಉಂಟಾದ/ತುರ್ತು ಸಂಧರ್ಭಗಳಲ್ಲಿ ಒಂದು Boom Barrier ಅನ್ನು ಸಹ ನಿರ್ಮಿಸಿ ಕೆಳಸೇತುವೆಯ ವಾಹನ ನಿರ್ಬಂಧ ಪಡಿಸುವ ಕ್ರಮವನ್ನು ಸಂಚಾರ ಪೊಲೀಸ್ ಇಲಾಖೆಯ ಸಹಯೋಗದಿಂದ ನಿರ್ವಹಣೆ ಮಾಡಲು ಉದ್ದೇಶಿಸಲಾಗಿದೆ.

ಪ್ರಧಾನ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಕೊಡಿಗೇಹಳ್ಳಿ ರೈಲ್ವೆ ವಾಹನ ಕೆಳಸೇತುವೆಯ ನೀರು ನಿಲ್ಲುವಿಕೆಯ ಬಗ್ಗೆ**
**ಸಂಪೂರ್ಣ ವರದಿ**

* * * * *

**ಹಿನ್ನಲೆ:**

ಸದರಿ ಕೊಡಿಗೇಹಳ್ಳಿ ರೈಲ್ವೆ ವಾಹನ ಕೆಳಸೇತುವೆಯನ್ನು ರೈಲ್ವೆ ಇಲಾಖೆಯವರು 2014–15ರಲ್ಲಿ ಪ್ರಾರಂಭಿಸಿ, 2022ರಲ್ಲಿ ಪೂರ್ಣಗೊಳಿಸಿರುತ್ತಾರೆ. ಸದರಿ ರೈಲ್ವೆ ಕೆಳಸೇತುವೆಯಲ್ಲಿ ಬಹುವಾಗಿ ನೀರು ನಿಲ್ಲುವಿಕೆಯಾಗುತ್ತಿದ್ದು, ಇದನ್ನು ಪರಿಗಣಿಸಿ ರೈಲ್ವೆ ಇಲಾಖೆಯವರಿಂದಲೇ ಕೆಳಸೇತುವೆಯಿಂದ ಸುಮಾರು 450.00ಮೀ ದೂರದಲ್ಲಿರುವ ರಾಜಕಾಲುವೆಗೆ ಸಂಪರ್ಕಿಸಲು 1.20ಮೀ ವ್ಯಾಸದ ಕೊಳವೆಗಳನ್ನು ಹಾಕಲು ಸೂಚಿಸಲಾಗಿದ್ದು, ಅದರಂತೆ, ಪ್ರಸ್ತುತ 1.20ಮೀ ವ್ಯಾಸದ ಕೊಳವೆಗಳನ್ನು 450.00ಮೀ ದೂರದ ರಾಜಕಾಳುವೆಗೆ ಸಂಪರ್ಕಿಸಲಾಗಿರುತ್ತದೆ.

**ಈಗಿನ ವಾಸ್ತುಸ್ಥಿತಿ:**

ಸದರಿ 1.20ಮೀ ವ್ಯಾಸದ ನೀರಿನ ಕೊಳವೆಯನ್ನು ರಾಜಕಾಲುವೆಗೆ ಸಂಪರ್ಕಿಸಿರುವ ಹಿನ್ನಲೆಯಲ್ಲಿ ಯಾವುದೇ ನೀರು ನಿಲ್ಲುವಿಕೆಯಾಗುತ್ತಿಲ್ಲದಿರುವುದು ಕಂಡುಬಂದಿರುತ್ತದೆ.

**ಕೈಗೊಳ್ಳಬೇಕಾಗಿರುವ ಕ್ರಮಗಳು:**

ಪ್ರತಿ ಬಾರಿ ಮಳೆ ಬಂದ ಸಂಧರ್ಭದಲ್ಲಿ ಸದರಿ ಕೆಳಸೇತುವೆಯಲ್ಲಿ ಮರಳು ಮಿಶ್ರಿತ ಮಣ್ಣನ್ನು ತೆರವುಗೊಳಿಸಲು ಕ್ರಮವಹಿಸಬೇಕಾಗಿದ್ದು, ಅದಕ್ಕಾಗಿ ಈಗಾಗಲೇ ವಾರ್ಷಿಕ ನಿರ್ವಹಣೆಯನ್ನು ನೀಡಲಾಗಿರುತ್ತದೆ.

24/05/2023

ಪ್ರಧಾನ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಮೇಖ್ರಿ ವೃತ್ತದ ವಾಹನ ಕೆಳಸೇತುವೆಯ ನೀರು ನಿಲ್ಲುವಿಕೆಯ ಬಗ್ಗೆ**
**ಸಂಪೂರ್ಣ ವರದಿ**

* * * * *

**ಹಿನ್ನಲೆ:**

ಮೇಖ್ರಿ ವೃತ್ತದ ವಾಹನ ಕೆಳಸೇತುವೆಯು ಬಳ್ಳಾರಿ ರಸ್ತೆ ಮತ್ತು ಸಿವಿ ರಾಮಾನ್ ರಸ್ತೆಯ ಕೂಡು ಜಾಗದಲ್ಲಿ 2001 ಮತ್ತು 2002ರಲ್ಲಿ ನಿರ್ಮಿಸಲಾಗಿದ್ದು, ಸದರಿ ಕೆಳಸೇತುವೆಯು ಬೆಂಗಳೂರು ನಗರದ ಕಡೆಗೆ ಎತ್ತರವಿದ್ದು, ಬಳ್ಳಾರಿಯ ಕಡೆಗೆ ಇಳಿಜಾರು ಇರುತ್ತದೆ. ಸದರಿ ಕೆಳಸೇತುವೆಯು ಒಂದು 'ಎಲ್' ಆಕಾರದ ಕೆಳಸೇತುವೆಯಾಗಿದ್ದು, ಕೆಳಸೇತುವೆಯ ತಳಭಾಗದಲ್ಲಿ ಒಂದು ಗ್ರೇಟಿಂಗ್‌ಅನ್ನು ನಿರ್ಮಿಸಲಾಗಿದ್ದು, ಸದರಿ ಗ್ರೇಟಿಂಗ್ ಮುಖಾಂತರ ಬಳ್ಳಾರಿಯ ಕಡೆಗೆ ರಸ್ತೆ ಬದಿಯ ಮೋರಿಗೆ ಸಂಪರ್ಕ ಕಲ್ಪಿಸಿರುವುದು ಕಂಡುಬಂದಿರುತ್ತದೆ.

ಸದರಿ ಕೆಳಸೇತುವೆಯು 'ಎಲ್' ಆಕಾರದ ಕೆಳಸೇತುವೆಯಾಗಿರುವುದು ಬಳ್ಳಾರಿಯ ಕಡೆಗೆ ಇಳಿಜಾರು ಇರುವುದರಿಂದ ಮಳೆ ನೀರು ಸ್ವಭಾವಿಕವಾಗಿ ಮತ್ತು ಸರಾಗವಾಗಿ ಹರಿದು ಹೋಗುತ್ತಿರುತ್ತದೆ. ಸದರಿ ಕೆಳಸೇತುವೆಯ ತಳಭಾಗದಲ್ಲಿರುವ ಉಕ್ಕಿನ ಗ್ರೇಟಿಂಗ್ ರಸ್ತೆಯ ಪೂರ್ಣ ಭಾಗಕ್ಕೂ ಸ್ಥಾಪಿತವಾಗಿದ್ದು, ಸದರಿ ಉಕ್ಕಿನ ಗ್ರೇಟಿಂಗ್‌ಗಳನ್ನು 2020ರಲ್ಲಿ ದುರಸ್ಥಿಗೊಳಿಸಿರುವುದು ಕಂಡುಬಂದಿರುತ್ತದೆ.

**ಕೈಗೊಳ್ಳಬೇಕಾಗಿರುವ ಕ್ರಮಗಳು:**

ಸದರಿ ಕೆಳಸೇತುವೆಯನ್ನು ಖಾಸಗಿ ಸಂಸ್ಥೆಗೆ ಜಾಹಿರಾತು ಹಕ್ಕಿನೊಂದಿಗೆ ಪಿಪಿಪಿ ಮಾದರಿಯಲ್ಲಿ ವಾರ್ಷಿಕ ನಿರ್ವಹಣೆಯನ್ನು ನೀಡಲಾಗಿದ್ದು, ಪ್ರತಿ ಬಾರಿ ಮಳೆ ಬಂದ ಸಂಧರ್ಭದಲ್ಲಿ ಸದರಿ ಕೆಳಸೇತುವೆಯಲ್ಲಿ ಮರಳು ಮಿಶ್ರಿತ ಮಣ್ಣನ್ನು ತೆರೆವುಗೊಳಿಸಲು ಮತ್ತು ಅದಕ್ಕೆ ಹೊಂದಿಕೊಂಡಿರುವ ಮೋರಿಯ ಹೂಳನ್ನು ತೆಗೆಯುವ ಕ್ರಮ ಜಾರಿಯಲಿರುತ್ತದೆ.

24/05/2023

ಪ್ರಧಾನ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಯಲಹಂಕ ರೈಲ್ವೆ ವಾಹನ ಕೆಳಸೇತುವೆಯ ನೀರು ನಿಲ್ಲುವಿಕೆಯ ಬಗ್ಗೆ
## ಸಂಪೂರ್ಣ ವರದಿ

* * * * *

**ಹಿನ್ನಲೆ:**

ಸದರಿ ಯಲಹಂಕ ರೈಲ್ವೆ ವಾಹನ ಕೆಳಸೇತುವೆಯು 'ಯು' ಆಕಾರದ ಕೆಳಸೇತುವೆಯಾಗಿದ್ದು, ಸದರಿ ಕೆಳಸೇತುವೆಯನ್ನು ರೈಲ್ವೆ ಇಲಾಖೆಯವರಿಂದ ನಿರ್ಮಿಸಲಾಗಿದ್ದು, ಕೆಳಸೇತುವೆಯ ತಳಭಾಗದಲ್ಲಿ ಮಳೆ ನೀರು ಹೋಗಲು ಚರಂಡಿಯನ್ನು ನಿರ್ಮಿಸಲಾಗಿದ್ದು, ಸದರಿ ಚರಂಡಿಗೆ ರಂಧ್ರಗಳಿರುವ ಕಾಂಕ್ರೀಟ್ ಚಾವಣಿಯನ್ನು ಹೊದಿಸಲಾಗಿರುತ್ತದೆ. ಸದರಿ ಚರಂಡಿಯು ರೈಲ್ವೆ ಇಲಾಖೆಯ ಹಳಿಗಳ ಪಕ್ಕದಲ್ಲಿರುವ ರಾಜಕಾಲುವೆಗೆ ಸಂಪರ್ಕಿಸಲಾಗಿದ್ದು, ನೀರು ನಿಲ್ಲುವಿಕೆಯು ಕಂಡುಬಂದಿರುವುದಿಲ್ಲ. ಆದರೆ, ಸದರಿ ನೀರು ಕಾಂಕ್ರೀಟ್ ರಂಧ್ರಗಳಲ್ಲಿ ನಿಧಾನವಾಗಿ ಹರಿದುಹೋಗುತ್ತಿರುವುದು ಕಂಡುಬಂದಿರುತ್ತದೆ.

**ಈಗಿನ ವಾಸ್ತುಸ್ಥಿತಿ:**

ಸದರಿ ಪ್ರದೇಶದಲ್ಲಿ 1.20ಮೀ * 1.20ಮೀ ಅಗಲದ ನೀರು ಹರಿಯುವ ಪರಿವೀಕ್ಷಣಾ ಚೇಂಬರ್ ನಿರ್ಮಿಸಲಾಗಿದ್ದು, ರಾಜಕಾಲುವೆಗೆ ಸಂಪರ್ಕಿಸಿರುವ ಹಿನ್ನಲೆಯಲ್ಲಿ ಯಾವುದೇ ನೀರು ನಿಲ್ಲುವಿಕೆಯಾಗುತ್ತಿಲ್ಲದಿರುವುದು ಕಂಡುಬಂದಿರುತ್ತದೆ.

**ಕೈಗೊಳ್ಳಬೇಕಾಗಿರುವ ಕ್ರಮಗಳು:**

ಪ್ರತಿ ಬಾರಿ ಮಳೆ ಬಂದ ಸಂಧರ್ಭದಲ್ಲಿ ಸದರಿ ಕೆಳಸೇತುವೆಯಲ್ಲಿ ಮರಳು ಮಿಶ್ರಿತ ಮಣ್ಣ ಕಾಂಕ್ರೀಟ್ ಮೇಲ್ಚಾವಣಿಯಲ್ಲಿ ಸಿಕ್ಕಿ ಹಾಕಿಕೊಳ್ಳುತ್ತಿರುವುದರಿಂದ ನೀರು ಹರಿಯಲು ಹೆಚ್ಚಿನ ಅವಧಿಯನ್ನು ತೆಗೆದುಕೊಳ್ಳುತ್ತಿರುತ್ತದೆ. ಸದರಿ ಕಾಂಕ್ರೀಟ್ ಹೊದಿಕೆಯನ್ನು ತೆರವುಗೊಳಿಸಿ ಕಬ್ಬಿಣದ ಗ್ರೇಟಿಂಗ್‌ಗಳನ್ನು ಅಳವಡಿಸಲು ಕ್ರಮಕೈಗೊಳ್ಳಲು ಸೂಚಿಸಿದೆ ಮತ್ತು ಪ್ರತಿ ಬಾರಿ ಮಳೆ ಬಂದ ಸಂಧರ್ಭದಲ್ಲಿ ವಾರ್ಷಿಕ ನಿರ್ವಹಣೆ ಮುಖಾಂತರ ಸ್ವಚ್ಛಗೊಳಿಸಲು ಸೂಚನೆ ನೀಡಲಾಗಿರುತ್ತದೆ.

24/05/2023

ಪ್ರಧಾನ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿ.ಎನ್.ಆರ್ ರಾವ್ ವೃತ್ತದ ವಾಹನ ಕೆಳಸೇತುವೆಯ ನೀರು ನಿಲ್ಲುವಿಕೆಯ ಬಗ್ಗೆ ಸಂಪೂರ್ಣ ವರದಿ

* * * * *

**ಹಿನ್ನಲೆ:**

ಸಿ.ಎನ್.ಆರ್ ರಾವ್ ವೃತ್ತದ ವಾಹನ ಕೆಳಸೇತುವೆಯು ಯಶವಂತಪುರ ಮತ್ತು ಮಾರಮ್ಮ ವೃತ್ತ ನಡುವೆ, ಭಾರತೀಯ ವಿಜ್ಞಾನ ಸಂಸ್ಥೆಯ ಮುಂಭಾಗದಲ್ಲಿ ಸ್ಥಾಪಿತವಾಗಿದ್ದು, ಸದರಿ ವಾಹನ ಕೆಳಸೇತುವೆಯು 'ವೈ' ಆಕಾರದಲ್ಲಿ ನಿರ್ಮಿತವಾಗಿರುತ್ತದೆ. ಸದರಿ ಕೆಳಸೇತುವೆಯಲ್ಲಿ ಮಳೆ ನೀರು ನಿಲ್ಲುವಿಕೆಗಾಗಿ ಪರಿಶೀಲಿಸಲಾಗಿದ್ದು, ಮೇಖ್ರಿ ವೃತ್ತದ ಕಡೆಗೆ ಹೋಗುವ ಮಾರ್ಗದಲ್ಲಿ ಒಂದು ಚರಂಡಿಯನ್ನು, ಯಶವಂತಪುರ ಕಡೆಗೆ ಹೋಗುವ ಮಾರ್ಗದಲ್ಲಿ ಒಂದು ಚರಂಡಿಯನ್ನು ಮತ್ತು ಮಲ್ಲೇಶ್ವರಂನ ಸರ್ಕಲ್ ಮಾರಮ್ಮ ಕಡೆಗೆ ಹೋಗುವ ಮಾರ್ಗದಲ್ಲಿ ಮತ್ತೊಂದು ಚರಂಡಿಯನ್ನು ನಿರ್ಮಿಸಿ ಅದಕ್ಕೆ ಕಬ್ಬಿಣದ ಹೊದಿಕೆಯನ್ನು ಒದಗಿಸಲಾಗಿರುತ್ತದೆ. ಸದರಿ ಕೆಳಸೇತುವೆಯು 2015ರಲ್ಲಿ ಪೂರ್ಣಗೊಂಡಿದ್ದು, ಸದರಿ ತಳಭಾಗದಲ್ಲಿರುವ ಚರಂಡಿಗಳು ಒಂದಕ್ಕೊಂದು ಜೊಡಣೆಯಾಗಿ 1.20ಮೀ ವ್ಯಾಸದ ಕೊಳವೆ ಮುಖಾಂತರ ಸುಮಾರು 300.00 ಮೀಟರ್ ದೂರದಲ್ಲಿ ರಸ್ತೆ ಬದಿಯ ಮೋರಿಗೆ ಸಂಪರ್ಕಿಸಲಾಗಿರುತ್ತದೆ.

ಸದರಿ ರಸ್ತೆಯಲ್ಲಿ ಇತ್ತೀಚ್ಚೆಗೆ ವೈಟ್ ಟಾಫಿಂಗ್‌ಅನ್ನು ನಿರ್ಮಿಸಿರುವುದು ಕಂಡುಬಂದಿದ್ದು, ನೀರು ನಿಲ್ಲುವಿಕೆ ಕಂಡುಬಂದಿರುವುದಿಲ್ಲ.

ಸದರಿ ಕೆಳಸೇತುವೆಯ ಎರಡು ಭಾಗವು ಅಂದರೆ, ಪಶ್ಚಿಮ ಭಾಗದಲ್ಲಿ ಯಶವಂತಪುರ ಕಡೆಗೆ ಇಳಿಜಾರು ಮತ್ತು ಪೂರ್ವದ ಕಡೆಗೆ ಸರ್ಕಲ್ ಮಾರಮ್ಮ ಕಡೆಗೆ ಇಳಿಜಾರು ಇರುವುದರಿಂದ ರಸ್ತೆಯ ಮೇಲ್ಮೈ ಭಾಗದ ನೀರು ಕೆಳಸೇತುವೆಯ ತಳಭಾಗಕ್ಕೆ ಸೇರುವ ಯಾವುದೇ ಸಂಭವವಿರುವುದಿಲ್ಲ.

**ಕೈಗೊಳ್ಳಬೇಕಾಗಿರುವ ಕ್ರಮಗಳು:**

ಸದರಿ ಕೆಳಸೇತುವೆಯನ್ನು ಖಾಸಗಿ ಸಂಸ್ಥೆಗೆ ಜಾಹಿರಾತು ಹಕ್ಕಿನೊಂದಿಗೆ ಪಿಪಿಪಿ ಮಾದರಿಯಲ್ಲಿ ವಾರ್ಷಿಕ ನಿರ್ವಹಣೆಯನ್ನು ನೀಡಲಾಗಿದ್ದು, ಪ್ರತಿ ಬಾರಿ ಮಳೆ ಬಂದ ಸಂಧರ್ಭದಲ್ಲಿ ಸದರಿ ಕೆಳಸೇತುವೆಯಲ್ಲಿ ಮರಳು ಮಿಶ್ರಿತ ಮಣ್ಣನ್ನು ತೆರವುಗೊಳಿಸಲು ಮತ್ತು ಅದಕ್ಕೆ ಹೊಂದಿಕೊಂಡಿರುವ ಮೋರಿಯ ಹೂಳನ್ನು ತೆಗೆಯುವ ಕ್ರಮ ಜಾರಿಯಲಿರುತ್ತದೆ.

24/05/2023

ಪ್ರಧಾನ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಕುವೆಂಪು ವೃತ್ತದ (ಹೊರವರ್ತುಲ ರಸ್ತೆ ಮತ್ತು ನ್ಯೂ ಬಿ.ಇ.ಎಲ್ ರಸ್ತೆ)**
**ಕೂಡು ಜಾಗದಲ್ಲಿ ವಾಹನ ಕೆಳಸೇತುವೆಯ ನೀರು ನಿಲ್ಲುವಿಕೆಯ ಬಗ್ಗೆ**
**ಸಂಪೂರ್ಣ ವರದಿ**

* * * * *

**ಹಿನ್ನಲೆ:**

ಸದರಿ ವಾಹನ ಕೆಳಸೇತುವೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಿಸಲಾಗಿದ್ದು, ಸದರಿ ಕೆಳಸೇತುವೆಯು 'ಎಲ್' ಆಕಾರದಲ್ಲಿದ್ದು, ಕೆಳಸೇತುವೆಯ ಒಂದು ರಸ್ತೆಯ ಬದಿಯಲ್ಲಿ ಚರಂಡಿಯನ್ನು ನಿರ್ಮಿಸಿದ್ದು, ಸದರಿ ಚರಂಡಿಯಿಂದ ರಾಜಕಾಲುವೆಗೆ ಸಂಪರ್ಕ ಕಲ್ಪಿಸಲಾಗಿರುತ್ತದೆ. ಸದರಿ ಕೆಳಸೇತುವೆಯು ಭದ್ರಪ್ಪ ಲೇಔಟ್ ಕಡೆಗೆ ಇಳಿಜಾರು ಇದ್ದು, ಜಾಲಹಳ್ಳಿ ಕಡೆಗೆ ಎತ್ತರವಿರುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಕೆಳಸೇತುವೆಯಲ್ಲಿ ನೀರು ನಿಲ್ಲುವಿಕೆಗೆ ಅವಕಾಶವಿರುವುದಿಲ್ಲ.

**ಕೈಗೊಳ್ಳಬೇಕಾಗಿರುವ ಕ್ರಮಗಳು:**

ಸದರಿ ಕೆಳಸೇತುವೆಯನ್ನು ಖಾಸಗಿ ಸಂಸ್ಥೆಗೆ ಜಾಹಿರಾತು ಹಕ್ಕಿನೊಂದಿಗೆ ಪಿಪಿಪಿ ಮಾದರಿಯಲ್ಲಿ ವಾರ್ಷಿಕ ನಿರ್ವಹಣೆಯನ್ನು ನೀಡಲಾಗಿದ್ದು, ಪ್ರತಿ ಬಾರಿ ಮಳೆ ಬಂದ ಸಂಧರ್ಭದಲ್ಲಿ ಸದರಿ ಕೆಳಸೇತುವೆಯಲ್ಲಿ ನಿರ್ವಹಣೆಯನ್ನು ನೀಡಲಾಗಿದ್ದು, ಪ್ರತಿ ಬಾರಿ ಮಳೆ ಬಂದ ಸಂಧರ್ಭದಲ್ಲಿ ಸದರಿ ಕೆಳಸೇತುವೆಯಲ್ಲಿ ಮರಳು ಮಿಶ್ರಿತ ಮಣ್ಣನ್ನು ತೆರವುಗೊಳಿಸಲು ಮತ್ತು ಅದಕ್ಕೆ ಹೊಂದಿಕೊಂಡಿರುವ ಮೋರಿಯ ಹೂಳನ್ನು ತೆಗೆಯುವ ಕ್ರಮ ಜಾರಿಯಲಿರುತ್ತದೆ.

24/05/2023

ಪ್ರಧಾನ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಹೊರವರ್ತುಲ ರಸ್ತೆ ಮತ್ತು ಗಂಗಮ್ಮ ಗುಡಿ ವೃತ್ತಕ್ಕೆ ಸೇರುವ ಕೂಡು ಜಾಗದಲ್ಲಿ ವಾಹನ ಕೆಳಸೇತುವೆಯ ನೀರು ನಿಲ್ಲುವಿಕೆಯ ಬಗ್ಗೆ ಸಂಪೂರ್ಣ ವರದಿ**

* * * * *

**ಹಿನ್ನಲೆ:**

ಸದರಿ ವಾಹನ ಕೆಳಸೇತುವೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಿಸಲಾಗಿದ್ದು, ಸದರಿ ಕೆಳಸೇತುವೆಯು 'ಎಲ್' ಆಕಾರದಲ್ಲಿದ್ದು, ಕೆಳಸೇತುವೆಯ ಒಂದು ರಸ್ತೆಯ ಬದಿಯಲ್ಲಿ ಚರಂಡಿಯನ್ನು ನಿರ್ಮಿಸಿದ್ದು, ಸದರಿ ಚರಂಡಿಯಿಂದ ರಾಜಕಾಲುವೆಗೆ ಸಂಪರ್ಕ ಕಲ್ಪಿಸಲಾಗಿರುತ್ತದೆ. ಸದರಿ ಕೆಳಸೇತುವೆಯು ಭದ್ರಪ್ಪ ಲೇಔಟ್ ಕಡೆಗೆ ಇಳಿಜಾರು ಇದ್ದು, ಜಾಲಹಳ್ಳಿ ಕಡೆಗೆ ಎತ್ತರವಿರುತ್ತದೆ. ಈ ಹಿನ್ನಲೆಯಲ್ಲಿ ಸದರಿ ಕೆಳಸೇತುವೆಯಲ್ಲಿ ನೀರು ನಿಲ್ಲುವಿಕೆಗೆ ಅವಕಾಶವಿರುವುದಿಲ್ಲ.

**ಕೈಗೊಳ್ಳಬೇಕಾಗಿರುವ ಕ್ರಮಗಳು:**

ಸದರಿ ಕೆಳಸೇತುವೆಯನ್ನು ಖಾಸಗಿ ಸಂಸ್ಥೆಗೆ ಜಾಹಿರಾತು ಹಕ್ಕಿನೊಂದಿಗೆ ಪಿಪಿಪಿ ಮಾದರಿಯಲ್ಲಿ ವಾರ್ಷಿಕ ನಿರ್ವಹಣೆಯನ್ನು ನೀಡಲಾಗಿದ್ದು, ಪ್ರತಿ ಬಾರಿ ಮಳೆ ಬಂದ ಸಂಧರ್ಭದಲ್ಲಿ ಸದರಿ ಕೆಳಸೇತುವೆಯಲ್ಲಿ ಮರಳು ಮಿಶ್ರಿತ ಮಣ್ಣನ್ನು ತೆರವುಗೊಳಿಸಲು ಮತ್ತು ಅದಕ್ಕೆ ಹೊಂದಿಕೊಂಡಿರುವ ಮೋರಿಯ ಹೂಳನ್ನು ತೆಗೆಯುವ ಕ್ರಮ ಜಾರಿಯಲಿರುತ್ತದೆ.

24/05/2023

ಪ್ರಧಾನ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಆರ್.ಎಂ.ವಿ ಬಡಾವಣೆಯಲ್ಲಿ ಫೇರ್‌ಫೀಲ್ಡ್ ವಸತಿ ಸಂಕೀರ್ಣದ ಪಕ್ಕದಲ್ಲಿರುವ ರೈಲ್ವೆ ವಾಹನ ಕೆಳಸೇತುವೆಯ ನೀರು ನಿಲ್ಲುವಿಕೆಯ ಬಗ್ಗೆ ಸಂಪೂರ್ಣ ವರದಿ**

* * * * *

**ಹಿನ್ನಲೆ:**

ಸದರಿ ರೈಲ್ವೆ ವಾಹನ ಕೆಳಸೇತುವೆಯನ್ನು ರೈಲ್ವೆ ಇಲಾಖೆಯ ವತಿಯಿಂದ ನಿರ್ಮಿಸಲಾಗಿದ್ದು, ಆರ್.ಎಂ.ವಿ ಬಡಾವಣೆಯಿಂದ ಹೊರವರ್ತುಲ ರಸ್ತೆಗೆ ಸಂಪರ್ಕಿಸುವ ಜಾಗದಲ್ಲಿ 'ಯು' ಆಕಾರದಲ್ಲಿ ರೈಲ್ವೆ ವಾಹನ ಕೆಳಸೇತುವೆಯು ಸ್ಥಾಪಿತವಾಗಿದ್ದು, ಸದರಿ ವಾಹನ ಕೆಳಸೇತುವೆಯ ತಳಭಾಗದಲ್ಲಿ ಚರಂಡಿಯನ್ನು ನಿರ್ಮಿಸಲಾಗಿದ್ದು, ಸದರಿ ಚರಂಡಿಯು ಪಕ್ಕದಲ್ಲಿಯೇ ಇರುವ ರಾಜಕಾಲುವೆಗೆ ನೇರವಾಗಿ ಸಂಪರ್ಕ ಹೊಂದಿದ್ದು, ನೀರು ನಿಲ್ಲುವಿಕೆಗೆ ಯಾವುದೇ ಆಸ್ಪದವಿರುವುದಿಲ್ಲ.

**ಕೈಗೊಳ್ಳಬೇಕಾಗಿರುವ ಕ್ರಮಗಳು:**

ಪ್ರತಿ ಬಾರಿ ಮಳೆ ಬಂದ ಸಂಧರ್ಭದಲ್ಲಿ ಸದರಿ ಕೆಳಸೇತುವೆಯಲ್ಲಿ ಮರಳು ಮಿಶ್ರಿತ ಮಣ್ಣನ್ನು ತೆರವುಗೊಳಿಸಲು ಕ್ರಮವಹಿಸಬೇಕಾಗಿದ್ದು, ಅದಕ್ಕಾಗಿ ಈಗಾಗಲೇ ವಾರ್ಷಿಕ ನಿರ್ವಹಣೆಯನ್ನು ನೀಡಲಾಗಿರುತ್ತದೆ.

24/3/2023

ಪ್ರಧಾನ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಬೆಂಗಳೂರು ಕನ್‌ಟೋನ್‌ಮೆಂಟ್ ರೈಲ್ವೆ ನಿಲ್ದಾಣ ವೃತ್ತದ ರೈಲ್ವೆ ವಾಹನ ಕೆಳಸೇತುವೆಯ ನೀರು ನಿಲ್ಲುವಿಕೆಯ ಬಗ್ಗೆ ಸಂಪೂರ್ಣ ವರದಿ**

* * * * *

**ಹಿನ್ನಲೆ:**

ಬೆಂಗಳೂರು ಕನ್‌ಟೋನ್‌ಮೆಂಟ್ ರೈಲ್ವೆ ನಿಲ್ದಾಣದ ಪ್ರದೇಶದಲ್ಲಿ ಜಯಮಹಲ್ ರಸ್ತೆ ಮತ್ತು ಮಿಲ್ಲರ್ ರಸ್ತೆ ಮಧ್ಯಭಾಗದಲ್ಲಿ ರೈಲ್ವೆ ವಾಹನ ಕೆಳಸೇತುವೆಯನ್ನು ನಿರ್ಮಿಸಲಾಗಿದ್ದು, ಸದರಿ ರೈಲ್ವೆ ಕೆಳಸೇತುವೆಯ ತಳಭಾಗದಲ್ಲಿ 03 ಚರಂಡಿಗಳು ಸ್ಥಾಪಿತವಾಗಿದ್ದು, ಸದರಿ 03 ಚರಂಡಿಗಳಿಂದ ಕೊಡವ ಸಮಾಜದ ಕಡೆಗೆ ಹರಿದು ಹೋಗುವ ರಾಜಕಾಲುವೆಗೆ ಸಂಪರ್ಕ ಕಲ್ಪಿಸಲಾಗಿದ್ದು, ಸದರಿ ರೈಲ್ವೆ ಕೆಳಸೇತುವೆಯು 'ಎಲ್' ಆಕಾರದಲ್ಲಿ ಇರುವುದರಿಂದ ನೀರು ನಿಲ್ಲುವಿಕೆಗೆ ಯಾವುದೇ ಸಾಧ್ಯತೆ ಇರುವುದಿಲ್ಲ.

**ಕೈಗೊಳ್ಳಬೇಕಾಗಿರುವ ಕ್ರಮಗಳು:**

ಪ್ರತಿ ಬಾರಿ ಮಳೆ ಬಂದ ಸಂಧರ್ಭದಲ್ಲಿ ಸದರಿ ಕೆಳಸೇತುವೆಯಲ್ಲಿ ಮರಳು ಮಿಶ್ರಿತ ಮಣ್ಣನ್ನು ತೆರವುಗೊಳಿಸಲು ಕ್ರಮವಹಿಸಬೇಕಾಗಿದ್ದು, ಅದಕ್ಕಾಗಿ ಈಗಾಗಲೇ ವಾರ್ಷಿಕ ನಿರ್ವಹಣೆಯನ್ನು ನೀಡಲಾಗಿರುತ್ತದೆ.

24/3/2023

ಪ್ರಧಾನ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಆನಂದನಗರದ ಹೆಬ್ಬಾಳ ಸಂಚಾರಿ ಪೊಲೀಸ್ ಠಾಣೆಯ ಮುಂಭಾಗದಲ್ಲಿ ನಿರ್ಮಿತವಾಗಿರುವ ವಾಹನ ಕೆಳಸೇತುವೆಯ ನೀರು ನಿಲ್ಲುವಿಕೆಯ ಬಗ್ಗೆ ಸಂಪೂರ್ಣ ವರದಿ**

* * * * *

**ಹಿನ್ನಲೆ:**

ಆನಂದನಗರದ ಹೆಬ್ಬಾಳ ಸಂಚಾರಿ ಪೊಲೀಸ್ ಠಾಣೆಯ ಮುಂಭಾಗದಲ್ಲಿ ಆನಂದನಗರ ಬಡಾವಣೆಗೆ ಸಂಪರ್ಕ ಕಲ್ಪಿಸಲು 'ಎಲ್' ಆಕಾರದ ವಾಹನ ಕೆಳಸೇತುವೆಯನ್ನು ನಿರ್ಮಿಸಲಾಗಿದ್ದು, ಸದರಿ ಕೆಳಸೇತುವೆಯು ಪಶ್ಚಿಮ ಭಾಗದಲ್ಲಿ ಎತ್ತರವಾಗಿದ್ದು, ಪೂರ್ವದ ಕಡೆಗೆ ಇಳಿಜಾರು ಹೊಂದಿರುತ್ತದೆ. ಸದರಿ ಕೆಳಸೇತುವೆಯನ್ನು 2009 ರಿಂದ 2011ರ ಅವಧಿಯಲ್ಲಿ ನಿರ್ಮಿಸಲಾಗಿದ್ದು, **ಪ್ರೀ-ಕ್ಯಾಸ್ಟ್ ಕಾಂಕ್ರೀಟ್ ಸೆಗ್‌ಮೆಂಟ್ಸ್‌ಗಳನ್ನು ಉಪಯೋಗಿಸಿಕೊಂಡು ನಿರ್ಮಿಸಿರುವ ಕೆಳಸೇತುವೆಯಾಗಿರುತ್ತದೆ.**

ಸದರಿ ಕೆಳಸೇತುವೆಯು 'ಎಲ್' ಆಕಾರದ ಕೆಳಸೇತುವೆಯಾಗಿದ್ದು, ಪೂರ್ವದ ಕಡೆಗೆ ಇಳಿಜಾರು ಪ್ರದೇಶವಾಗಿರುವುದರಿಂದ, ಕರ್ನಾಟಕ ಸರ್ಕಾರದ ವೆಟರ್ನರಿ ಕಾಲೇಜು ಆವರಣದ ಚರಂಡಿಗೆ ಸಂಪರ್ಕ ಹೊಂದಿರುವ ಹಿನ್ನಲೆಯಲ್ಲಿ ನೀರು ನಿಲ್ಲುವಿಕೆಗೆ ಯಾವುದೇ ಸಾಧ್ಯತೆ ಇರುವುದಿಲ್ಲ.

**ಕೈಗೊಳ್ಳಬೇಕಾಗಿರುವ ಕ್ರಮಗಳು:**

ಪ್ರತಿ ಬಾರಿ ಮಳೆ ಬಂದ ಸಂಧರ್ಭದಲ್ಲಿ ಸದರಿ ಕೆಳಸೇತುವೆಯಲ್ಲಿ ಮರಳು ಮಿಶ್ರಿತ ಮಣ್ಣನ್ನು ತೆರವುಗೊಳಿಸಲು ಕ್ರಮವಹಿಸಬೇಕಾಗಿದ್ದು, ಅದಕ್ಕಾಗಿ ಈಗಾಗಲೇ ವಾರ್ಷಿಕ ನಿರ್ವಹಣೆಯನ್ನು ನೀಡಲಾಗಿರುತ್ತದೆ.

24/5/2023

ಪ್ರಧಾನ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ನ್ಯಾಯಾಂಡನಹಳ್ಳಿ ಕೂಡು ಜಾಗದಲ್ಲಿ ನಿರ್ಮಿತವಾಗಿರುವ ರೈಲ್ವೆ ವಾಹನ ಕೆಳಸೇತುವೆಯ ನೀರು ನಿಲ್ಲುವಿಕೆಯ ಬಗ್ಗೆ ಸಂಪೂರ್ಣ ವರದಿ**

* * * * *

**ಹಿನ್ನಲೆ:**

ನ್ಯಾಯಾಂಡನಹಳ್ಳಿ ಕೂಡು ರೈಲ್ವೆ ಕೆಳಸೇತುವೆಯು 'ಎಲ್' ಆಕಾರದಲ್ಲಿ ನಿರ್ಮಿತವಾಗಿದ್ದು, ಪಶ್ಚಿಮ ಭಾಗದ ನಾಗರಭಾವಿ ಕಡೆಗೆ ಎತ್ತರವಿದ್ದು, ನ್ಯಾಯಾಂಡನಹಳ್ಳಿ ಕೂಡು ಜಾಗದಲ್ಲಿ ಇಳಿಜಾರು ಪ್ರದೇಶವಿದ್ದು, ರಾಜಕಾಲುವೆಗೆ ಸಂಪರ್ಕಿಸುತ್ತಿರುತ್ತದೆ. ಸದರಿ ರೈಲ್ವೆ ಕೆಳಸೇತುವೆಯು ರೈಲ್ವೆ ಇಲಾಖೆ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಿಂದ ಹೊರವರ್ತುಲ ರಸ್ತೆಯಲ್ಲಿ ನಿರ್ಮಿಸಲಾಗಿದ್ದು, ಇತ್ತೀಚೆಗೆ ಬಿಬಿಎಂಪಿ ವತಿಯಿಂದ ವೈಟ್ ಟಾಪಿಂಗ್ ಕಾಮಗಾರಿಯನ್ನು ನಿರ್ವಹಿಸಲಾಗಿರುತ್ತದೆ. ಸದರಿ ಕೆಳಸೇತುವೆ ಭಾಗದಲ್ಲಿ ನೀರು ನಿಲ್ಲುವಿಕೆಯ ಸಾಧ್ಯತೆ ಇರುವುದಿಲ್ಲ.

**ಕೈಗೊಳ್ಳಬೇಕಾಗಿರುವ ಕ್ರಮಗಳು:**

ಪ್ರತಿ ಬಾರಿ ಮಳೆ ಬಂದ ಸಂಧರ್ಭದಲ್ಲಿ ಸದರಿ ಕೆಳಸೇತುವೆಯಲ್ಲಿ ಮರಳು ಮಿಶ್ರಿತ ಮಣ್ಣನ್ನು ತೆರವುಗೊಳಿಸಲು ಕ್ರಮವಹಿಸಬೇಕಾಗಿದ್ದು, ಅದಕ್ಕಾಗಿ ಈಗಾಗಲೇ ವಾರ್ಷಿಕ ನಿರ್ವಹಣೆಯನ್ನು ನೀಡಲಾಗಿರುತ್ತದೆ.

24/3/2022

ಪ್ರಧಾನ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ